# ಬೆಂಗಳೂರು ನಗರದಲ್ಲಿ

## ಮಹಿಳಾ ರಸ್ತೆಬದಿ ವ್ಯಾಪಾರಿಗಳು

ಚನ್ನಮ್ಮ ಕಂಬಾರ ಮತ್ತು ಮುತ್ತರಾಯಪ್ಪ ಆರ್[1]



### ಹಿನ್ನೆಲೆ:

ಅನೌಪಚಾರಿಕ ವಲಯವು ವಿಧವಿಧವಾದ ವ್ಯಾಪಕ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಭಾರತದ ಒಟ್ಟಾರೆ ಕಾರ್ಮಿಕರ ಪೈಕಿ ಶೇ ೯೨ ಭಾಗ ಈ ವಲಯದ ವ್ಯಾಪ್ತಿಗೇ ಬರುತ್ತಾರೆ. ಈ ವಲಯದ ಬಹುಪಾಲು ಕಾರ್ಮಿಕರು (ಶೇ. ೭೭) ೨೦೦೮ರ ಎನ್‌ಸಿಇಯುಎಸ್ ಸಮೀಕ್ಷೆಯ ಪ್ರಕಾರ ದಿನಕ್ಕೆ ಕೇವಲ ೨೦ ರೂಗಳಷ್ಟು ಮಾತ್ರ ಆದಾಯವನ್ನು ಗಳಿಸುತ್ತಿದ್ದಾರೆ. ಈ ವಲಯದ ವ್ಯಾಪ್ತಿಗೆ ಬರುವ ಶೇ ೮೦ ರಷ್ಟು ಕಾರ್ಮಿಕರು ಬಡವರಾಗಿದ್ದಾರೆ ಮತ್ತು ದೌರ್ಬಲ್ಯಕ್ಕೆ ಪಕ್ಕಾಗುವವರಾಗಿದ್ದಾರೆ (ಠಾಕೂರ್ ಮತ್ತು ರಾಮನ್, ೨೦೦೭). ಇಲ್ಲಿ ಗಮನಿಸಬೇಕಾದ ಕುತೂಹಲಕಾರಿ ಅಂಶವೇನೆಂದರೆ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅನೌಪಚಾರಿಕ ವಲಯವು ಪುರುಷರಿಗಿಂತ ಮಹಿಳೆಯರಿಗೇ ಹೆಚ್ಚು ಉದ್ಯೋಗವನ್ನು ಒದಗಿಸುತ್ತಿದೆ (ಸುಮಾರು ಶೇ. ೬೦ ರಷ್ಟು ಭಾಗ) (ಚೆನ್ ಮತ್ತಿತರರು, ೨೦೦೪). ಈ ಮಹಿಳೆಯರು ಕಿರಿದಾದ ವ್ಯಾಪ್ತಿಯ ಚಟುವಟಿಕೆಗಳಲ್ಲಿ ತೊಡಗಿ ಅತಿ ಕಡಿಮೆ ಆದಾಯವನ್ನು ಗಳಿಸುತ್ತಿದ್ದಾರೆ. ಆದರೂ ಸಹ, ಈ ವಲಯದಲ್ಲಿನ ಸುಲಭವಾದ ಪ್ರವೇಶ ಮತ್ತು ಸುಲಭವಾದ ನಿರ್ಗಮನಗಳು ಮಹಿಳೆಯರಿಗೆ ಅನುಕೂಲಕರವಾಗಿದೆ. ಮಹಿಳೆಯರಿಗೆ ಗರ್ಭಧಾರಣಾ ಕರ್ತವ್ಯವೂ ಸಹ ಇರುವುದರಿಂದ, ಈ ಸುಲಭತೆಯು ಅವರುಗಳು ಇಲ್ಲಿ ಮುಂದುವರೆಯುವಂತೆ ಮಾಡಿದೆ. ಜೊತೆಗೆ ಬಹಳಷ್ಟು ಮಹಿಳೆಯರು ಅನಕ್ಷರಸ್ಥರಾಗಿರುವುದರಿಂದಲೂ ಮತ್ತು ಅಗತ್ಯವಾದ ಕೌಶಲ್ಯಗಳನ್ನು ಹೊಂದಿಲ್ಲದಿರುವುದರಿಂದಲೂ, ಔಪಚಾರಿಕ ವಲಯಕ್ಕೆ ಪ್ರವೇಶಿಸುವುದು ಅವರಿಗೆ ಕಷ್ಟಕರವಾಗಿರುತ್ತದೆ.

ಅನೌಪಚಾರಿಕ ವಲಯಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ದತ್ತಾಂಶದ ಪ್ರಕಾರ ಭಾರತದ ಮಟ್ಟಿಗೆ ಒಟ್ಟಾರೆ ಕಾರ್ಮಿಕವರ್ಗದ ಅರ್ಧದಷ್ಟು ಭಾಗ ಸ್ವಯಂ ಉದ್ಯೋಗವನ್ನೇ ಅವಲಂಬಿಸಿದೆ. ಈ ವಾಸ್ತವವನ್ನು ಕೃಷಿ ಕ್ಷೇತ್ರದಲ್ಲಿಯೂ ನೋಡಬಹುದಾಗಿದೆ ಹಾಗೂ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಕೃಷಿಯೇತರ ಚಟುವಟಿಕೆಗಳಲ್ಲೂ ಕಾಣಬಹುದಾಗಿದೆ. ಕೃಷಿ ಕ್ಷೇತ್ರದಲ್ಲಿ ಕುಟುಂಬದ ಸಾಗುವಳಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಮಹಿಳೆಯರು ತೊಡಗುವುದು ತೀರಾ ಸಾಮಾನ್ಯವಾಗಿದ್ದು, ಇದೇ ರೀತಿಯಲ್ಲಿಯೇ ಅವರುಗಳು ಕೃಷಿಯೇತರ ಚಟುವಟಿಕೆಗಳಲ್ಲೂ ತೊಡಗಿಕೊಳ್ಳುತ್ತಾರೆ (ಘೋಷ್, ೨೦೦೯). ಬಹುಪಾಲು ಸ್ವಯಂ ಉದ್ಯೋಗಿ ಮಹಿಳೆಯರು ತಮಗೋಸ್ಕರ ಉದ್ಯೋಗ ಸೃಷ್ಟಿಸಿಕೊಳ್ಳಲು ತಮ್ಮದೇ ಬಂಡವಾಳವನ್ನು ಮತ್ತು ಆದಾಯವನ್ನು ಗಳಿಸಿಕೊಳ್ಳಲು ತಮ್ಮ ಹಾಗೂ ಕುಟುಂಬದ ಸದಸ್ಯರ ಶ್ರಮವನ್ನೇ ಬಳಸಿಕೊಳ್ಳುತ್ತಾರೆ. ಅನೌಪಚಾರಿಕ ಆರ್ಥಿಕವಲಯದಲ್ಲಿ ಕಣ್ಣಿಗೆ ಕಾಣುವ ಬಹಳಷ್ಟು ವೃತ್ತಿಪರ ಗುಂಪುಗಳು ರಸ್ತೆಗಳಲ್ಲಿ ಅಥವಾ ಬಯಲು ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುವ ಗುಂಪುಗಳೇ ಆಗಿರುತ್ತವೆ. ನಗರಗಳ ಬೀದಿ ವ್ಯಾಪಾರಿಗಳ ರಾಷ್ಟ್ರೀಯ ಕಾರ್ಯನೀತಿ (ಎನ್‌ಪಿಯುಎಸ್‌ವಿ) ೨೦೦೯ರ ಅನ್ವಯ ಬೀದಿ ವ್ಯಾಪಾರಿಗಳನ್ನು ಅನೌಪಚಾರಿಕ ವಲಯದ ಸ್ವಯಂ ಉದ್ಯೋಗಿಗಳೆಂದು ಗುರುತಿಸಲಾಗಿದೆ. ಜೊತೆಗೆ ಇವರುಗಳನ್ನು ಯಾವುದೇ ಖಾಯಂ ಸೂರಿಲ್ಲದೆ ರಸ್ತೆಯಲ್ಲಿ ವಸ್ತುಗಳನ್ನು ಮಾರುವ ಹಾಗೂ ಸೇವೆಯನ್ನು ಒದಗಿಸುವ ವ್ಯಕ್ತಿಗಳೆಂದೂ ವ್ಯಾಖ್ಯಾನಿಸಲಾಗಿದೆ. ಇವರುಗಳು ನಗರಗಳ ಅನೌಪಚಾರಿಕ ಅರ್ಥವ್ಯವಸ್ಥೆಯಲ್ಲಿ ಸದಾ ಕಣ್ಣಿಗೆ ಕಾಣುವ ಜನವರ್ಗವಾಗಿದ್ದಾರೆ. ರಸ್ತೆ ವ್ಯಾಪಾರಿಗಳ ರಾಷ್ಟ್ರೀಯ ಕಾರ್ಯನೀತಿ, ೨೦೦೯ರ ಪ್ರಕಾರ, ನಗರಗಳ ಜನಸಂಖ್ಯೆಯ ಸುಮಾರು ಶೇ. ೨೫ ರಷ್ಟು ಜನರು ಬೀದಿ ವ್ಯಾಪಾರದಲ್ಲೂ ಮತ್ತು ತಿರುಗಾಡಿಕೊಂಡು ಮಾಡುವ ವ್ಯಾಪಾರದಲ್ಲೂ ತೊಡಗಿಕೊಂಡಿದ್ದಾರೆ. ಈ ರಸ್ತೆ ವ್ಯಾಪಾರಿಗಳ ಪೈಕಿ ಸುಮಾರು ಶೆ. ೪೦ ರಷ್ಟು ಜನರು ಮಹಿಳೆಯರೇ ಆಗಿದ್ದಾರೆ ಹಾಗೂ ಅವರಲ್ಲಿ ಹತ್ತಿರ ಹತ್ತಿರ ಶೇ. ೩೦ ರಷ್ಟು ಜನರು ಅವರವರ ಕುಟುಂಬಗಳಲ್ಲಿನ ಏಕೈಕ ಗಳಿಸುವ ಸದಸ್ಯರಾಗಿದ್ದಾರೆ (ಭಾರತ ಸರ್ಕಾರ, ೨೦೦೯; ಗೀತಿಕಾ ಮತ್ತಿತರರು, ೨೦೧೧).

ಬೀದಿ ವ್ಯಾಪಾರಿಗಳ ಪೈಕಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬೇಗ ಹಾಳಾಗುವ ಆಹಾರ ಪದಾರ್ಥಗಳಾದ ಹಣ್ಣು, ತರಕಾರಿಗಳನ್ನು ಹಾಗೂ ಹೂವುಗಳನ್ನು ಮಾರುವ ಕಾಯಕದಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ (ಚನ್ನಮ್ಮ, ೨೦೧೦). ಅನೌಪಚಾರಿಕ ವಲಯದಲ್ಲಿನ ಇತರ ಅನಾನುಕೂಲತೆಗಳ ನಡುವೆ ಈ ಮಹಿಳಾ ವ್ಯಾಪಾರಿಗಳನ್ನು ತಾವು ಮಾರುವ ಪದಾರ್ಥಗಳ ಬೇಗನೆ ಹಾಳಾಗುವ ಗುಣವೂ ಸಹ ಹೆಚ್ಚು ಹೈರಾಣಾಗಿಸುತ್ತದೆ. ಬೀದಿ ಬದಿಯಲ್ಲಿ ಮಾರಾಟ ಮಾಡುವಾಗ ಈ ಮಹಿಳೆಯರು ಅಭದ್ರತೆ, ಸಾರ್ವಜನಿಕ ಸ್ಥಳಗಳಲ್ಲಿ ತೊಂದರೆ ಹಾಗೂ ಕಾಟಗಳು ಇತ್ಯಾದಿಗಳನ್ನು ಅನುಭವಿಸಬೇಕಾಗುತ್ತದೆ (ಸೇಕರ್, ೨೦೦೮).

ಅನೌಪಚಾರಿಕ ವಲಯದ ಮಹಿಳಾ ಕಾರ್ಮಿಕರ ಬಗ್ಗೆ ಬಹಳಷ್ಟು ಅಧ್ಯಯನಗಳು ತಮ್ಮ ಗಮನವನ್ನು ಕೇಂದ್ರೀಕರಿಸಿವೆ. ಆದರೆ, ಈ ವಲಯದಲ್ಲಿನ ಬೀದಿ ಬದಿಯ ಮಹಿಳಾ ವ್ಯಾಪಾರಿಗಳ (ಬೇಗ ಹಾಳಾಗುವ ಪದಾರ್ಥಗಳನ್ನು ಮಾರುವ) ಕಾರ್ಯಕ್ಷಮತೆಯನ್ನು ಬಾಧಿಸುವ ಅಂಶಗಳ ಬಗ್ಗೆ ಮತ್ತು ಅವರ ಸಮಸ್ಯೆಗಳ ಬಗ್ಗೆ ಕೆಲವೇ ಅಧ್ಯಯನಗಳು ಆಗಿವೆ. ಆದ್ದರಿಂದ, ಈ ದಿಸೆಯಲ್ಲಿ ಸಂಘಟಿತ ಪ್ರಯತ್ನಗಳಾಗ ಬೇಕಾಗಿವೆ. ಈ ಪ್ರಯತ್ನಗಳ ಮೂಲಕ ಯೋಜಕರಿಗೆ ಹಾಗೂ ಕಾರ್ಯನೀತಿ ರೂಪಕರಿಗೆ ಉಪಯುಕ್ತ ಮಾಹಿತಿಗಳು ಸಿಗಬೇಕಿವೆ. ಈ ಉಪಯುಕ್ತ ಮಾಹಿತಿಗಳಿಂದ ಬೀದಿಬದಿಯ ಮಹಿಳಾ ವ್ಯಾಪಾರಿಗಳ ಸ್ಥಿತಿಗತಿಗಳನ್ನು ಸುಧಾರಿಸುವಂತಹ ಸೂಕ್ತ ಸಾಧನಾತಂತ್ರಗಳನ್ನು ರೂಪಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕಾರ್ಯನೀತಿ ಟಿಪ್ಪಣಿಯು ಬೆಂಗಳೂರು ನಗರದಲ್ಲಿ ಬೀದಿಬದಿಯಲ್ಲಿ ಹೂವು, ಹಣ್ಣು ಮತ್ತು ತರಕಾರಿಗಳನ್ನು ಮಾರುವ ಮಹಿಳಾ ವ್ಯಾಪಾರಿಗಳನ್ನು ಬಾಧಿಸುವ ಅಂಶಗಳ ಮೇಲೆ ಬೆಳಕು ಚೆಲ್ಲುತ್ತಿದೆ. ಜೊತೆಗೆ, ಅವರ ಕೆಲಸದ ವಾತಾವರಣದ ವಿಶ್ಲೇಷಣೆಯನ್ನೂಮಾಡುತ್ತಿದೆ. ಇವುಗಳ ಆಧಾರದ ಮೇಲೆ ಮಹಿಳಾ ವ್ಯಾಪಾರಿಗಳ ಸಮಸ್ಯೆಗಳನ್ನು ಬಗೆಹರಿಸಲು ಕಾರ್ಯನೀತಿ ಶಿಫಾರಸ್ಸುಗಳನ್ನೂ ಸಹ ಸೂಚಿಸಲಿದೆ.

ಪ್ರಸ್ತುತ ಸಂಶೋಧನಾ ಅಧ್ಯಯನವನ್ನು ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಮಾಡಲಾಗಿದೆ. ಅಧ್ಯಯನಕ್ಕಾಗಿ ಪ್ರಾಥಮಿಕ ಮತ್ತು ಉಪದತ್ತಾಂಶ ಮೂಲಗಳನ್ನು ಅವಲಂಬಿಸಲಾಗಿದೆ. ಪ್ರಾರಂಭದಲ್ಲಿ ಅಧ್ಯಯನ ಕ್ಷೇತ್ರವನ್ನು ಆಯ್ಕೆಮಾಡಲು "ಗಾತ್ರಕ್ಕನುಗುಣವಾದ ಸಾಧ್ಯತೆಗಳು (ಪಿಪಿಎಸ್)" ಎಂಬ ವಿಧಾನದಿಂದ ಮಾದರಿ ವಾರ್ಡುಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಬಿಬಿಎಂಪಿ ವ್ಯಾಪ್ತಿಗೆ ಬರುವ ೧೯೮ ವಾರ್ಡುಗಳ ಪೈಕಿ ೨೦ ವಾರ್ಡುಗಳನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಅವುಗಳ ವಿವರ ಈ ರೀತಿ ಇದೆ: ಮಲ್ಲೇಶ್ವರಂ, ನಾಗರಬಾವಿ, ಜಯನಗರ, ನಾಯಂಡಹಳ್ಳಿ, ಜಾಲಹಳ್ಳಿ ಕ್ರಾಸ್, ಯಶವಂತಪುರ, ಕೆಂಗೇರಿ, ವಿಜಯನಗರ, ಮೂಡಲಪಾಳ್ಯ, ಕಾಮಾಕ್ಷಿಪಾಳ್ಯ, ದಾಸರಹಳ್ಳಿ, ಬಸವೇಶ್ವರ ನಗರ, ಗಾಂಧಿ ಬಜಾರ್, ಮಡಿವಾಳ, ಗಂಗಾನಗರ, ಬನಶಂಕರಿ, ಬಿಟಿಎಂ ಲೇಔಟ್, ಗೊರಗುಂಟೆಪಾಳ್ಯ, ನಯನದ ಹಳ್ಳಿ ಮತ್ತು ರಾಜಾಜಿನಗರ. ಈ ಅಧ್ಯಯನಕ್ಕಾಗಿ ಆಯ್ದುಕೊಂಡ ದತ್ತಾಂಶದಾರರು ಆಯ್ದ ಪ್ರದೇಶಗಳ ರಸ್ತೆಗಳು ಮತ್ತು ರಸ್ತೆ ಬದಿಗಳಲ್ಲಿ ಮಾರಾಟ ಮಾಡುವ ಮಹಿಳೆಯರಾಗಿದ್ದರು.

೧. ಈ ಸಂಶೋಧನಾ ಅಧ್ಯಯನವನ್ನು ಐಸೆಕ್ ಮತ್ತು ಐಸಿಎಸ್‌ಎಸ್‌ಆರ್ ಸಂಸ್ಥೆಗಳು ಪ್ರಾಯೋಜಿಸಿವೆ.

ಸಂಪಾದಕರು:
ಎಸ್. ಮಾನಸಿ

## ಪ್ರಮುಖ ಫಲಿತಾಂಶಗಳು:

**ಸಂದರ್ಶನದಲ್ಲಿ ಭಾಗವಹಿಸಿದವರ ಸ್ಥೂಲ ಚಿತ್ರಣ:** ಬಹಳಷ್ಟು ಸಂಖ್ಯೆಯ ಮಹಿಳಾ ವ್ಯಾಪಾರಿಗಳು ೩೧ ರಿಂದ ೫೦ ವರ್ಷದವರಾಗಿದ್ದರು. ಹಾಗೆ ನೋಡಿದರೆ ೫೦ ವರ್ಷದ ನಂತರ ವ್ಯಾಪಾರದ ಕಷ್ಟಕೋಟಲೆಗಳು ಮತ್ತು ವಯಸ್ಸಿಗೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚಿನ ಮಹಿಳೆಯರನ್ನು ರಸ್ತೆಬದಿಯ ವ್ಯಾಪಾರದಿಂದ ದೂರ ಸರಿಯುವಂತೆ ಮಾಡುತ್ತವೆ. ಬಹುಪಾಲು ಮಹಿಳಾ ವ್ಯಾಪಾರಿಗಳು ಮದುವೆಯಾಗಿದ್ದರು. ಈ ವ್ಯಾಪಾರಿಗಳಲ್ಲಿ ಗಣನೀಯ ಸಂಖ್ಯೆಯ ವಿಧವೆಯರೂ ಇದ್ದರು. ಹೆಚ್ಚಿನವರು ಅನಕ್ಷರಸ್ಥರಾಗಿದ್ದರು. ಇವರೆಲ್ಲರೂ ಹಿಂದೂ ಕುಟುಂಬಗಳಿಂದ ಬಂದವರಾಗಿದ್ದು, ಮುಖ್ಯವಾಗಿ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದವರಾಗಿದ್ದರು.

ಮಹಿಳಾ ವ್ಯಾಪಾರಿಗಳ ಕುಟುಂಬದ ಗಾತ್ರವು ಸರಾಸರಿ ೩. ೫ ಜನರಿಂದ ಕೂಡಿತ್ತು. ಈ ಮಹಿಳೆಯರ ಗಂಡಂದಿರೂ ಸಹ ಸ್ವಯಂ ಉದ್ಯೋಗಿಗಳಾಗಿಯೋ ಅಥವಾ ಅನೌಪಚಾರಿಕ ವಲಯದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಂಡೋ ಇದ್ದರು. ಕೆಲವು ಕುಟುಂಬಗಳಲ್ಲಿ ಗಂಡಂದಿರು ಕೆಲಸವನ್ನೇ ಮಾಡುತ್ತಿಲ್ಲದ ನಿದರ್ಶನಗಳೂ ಇತ್ತು. ಇಂತಹ ಪುರುಷರು ಮದ್ಯವ್ಯಸನಿಗಳಾಗಿಯೂ ಮತ್ತು ತಮ್ಮ ಕುಟುಂಬಗಳ ನಿರ್ವಹಣೆಗೆ ತಾವು ಗಳಿಸಿದ ಹಣ ನೀಡದವರಾಗಿಯೂ ಇದ್ದರು. ಅಂತಹ ಸಂದರ್ಭಗಳಲ್ಲಿ ಆ ಕುಟುಂಬಗಳ ಮಹಿಳೆಯರು ಅನಿವಾರ್ಯವಾಗಿ ಕುಟುಂಬನಿರ್ವಹಣೆಗಾಗಿ ದುಡಿಯಲೇಬೇಕಿತ್ತು ಮತ್ತು ತಮ್ಮ ಮಕ್ಕಳ ಆರೋಗ್ಯ ಹಾಗೂ ಶಿಕ್ಷಣದ ಹೊಣೆಯನ್ನು ಹೊರಬೇಕಾಗಿತ್ತು.

ಸಾಮಾನ್ಯವಾಗಿ ಮಹಿಳೆಯರು ಅನೌಪಚಾರಿಕ ಆರ್ಥಿಕ ವಲಯವನ್ನು ಜೀವನೋಪಾಯಕ್ಕಾಗಿ ಪ್ರವೇಶಿಸುತ್ತಾರೆಯೇ ಹೊರತು, ವೃತ್ತಿ ಜೀವನವನ್ನು ಪ್ರಾರಂಭಿಸುವುದಕ್ಕಾಗಿ ಅಲ್ಲ. ಆದ್ದರಿಂದ, ಅವರು ಪ್ರಜ್ಞಾಪೂರ್ವಕವಾಗಿ ಈ ಜೀವನೋಪಾಯವನ್ನು ಆಯ್ಕೆ ಮಾಡಿಕೊಂಡಿಲ್ಲವೆಂದೂ ಮತ್ತು ಅವಕಾಶಗಳಿಲ್ಲದಿರುವಿಕೆಯಿಂದಲೂ ಹಾಗೂ ಬೆಂಬಲವಿಲ್ಲದಿರುವಿಕೆಯಿಂದಲೂ ಇದನ್ನು ಅವಲಂಬಿಸ ಬೇಕಾಯಿತೆಂದೂ ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ. ಈ ಮಹಿಳೆಯರ ಕರುಳ ಸಂಬಂಧಿಗಳು, ಪತಿ, ಪತಿಯ ಸಂಬಂಧಿಗಳು ಇವರೆಲ್ಲರ ವೃತ್ತಿ ಹಿನ್ನೆಲೆಗಳೂ ಹಾಗೂ ಪತಿಯ ಕುಟುಂಬದ ಆರ್ಥಿಕ ಹಿನ್ನೆಲೆಯೂ ಸಹ ಇವರುಗಳು ರಸ್ತೆಬದಿ ವ್ಯಾಪಾರಕ್ಕೆ ಇಳಿಯುವಂತೆ ಮಾಡುತ್ತವೆ.

**ಪಟ್ಟಿ ೧: ದತ್ತಾಂಶದಾರರ ಸಾಮಾಜಿಕ – ವೈಯುಕ್ತಿಕ ವಿವರಗಳು**

| ವೈಯುಕ್ತಿಕ ವಿವರಗಳು | ವರ್ಗೀಕರಣ | ಮಾರಾಟಗಾರರ ವೈವಿಧ್ಯತೆ | | | |
|---|---|---|---|---|---|
| | | ತರಕಾರಿ ವ್ಯಾಪಾರಿಗಳು | ಹಣ್ಣು ವ್ಯಾಪಾರಿಗಳು | ಹೂವಿನ ವ್ಯಾಪಾರಿಗಳು | ಒಟ್ಟು |
| ವಯಸ್ಸು | ೧೬–೩೦ | ೨೦.೧೨ | ೩೧.೦೩ | ೧೭.೧೭ | ೨೧.೨೦ |
| | ೩೧–೪೦ | ೩೦–೮೧ | ೩೬.೨೦ | ೨೩.೨೩ | ೨೯.೪೩ |
| | ೪೧–೫೦ | ೨೩.೨೭ | ೧೨.೦೬ | ೩೩.೩೩ | ೨೪.೨೬ |
| | ೫೧–೬೦ | ೧೯.೪೯ | ೧೩.೭೯ | ೧೪.೧೪ | ೧೬.೭೭ |
| | ೬೧–೮೫ | ೬.೨೮ | ೬.೮೯ | ೧೨.೧೨ | ೮.೨೨ |
| ವೈವಾಹಿಕ ಹಿನ್ನೆಲೆ | ಅವಿವಾಹಿತರು | ೨.೫೧ | ೧.೭೨ | ೨.೦೨ | ೨.೨೧ |
| | ವಿವಾಹಿತರು | ೬೧.೦೦ | ೭೦.೬೮ | ೫೯.೫೯ | ೬೨.೩೪ |
| | ವಿಧವೆಯರು | ೩೧.೪೪ | ೨೨.೪೧ | ೩೨.೩೨ | ೩೦.೦೬ |
| | ವಿಚ್ಛೇದಿತರು/ ಪರಿತ್ಯಕ್ತರು | ೫.೦೩ | ೫.೧೭ | ೬.೦೬ | ೫.೩೭ |
| ಧರ್ಮ | ಹಿಂದೂಗಳು | ೯೬.೨೨ | ೯೬.೫೫ | ೯೫.೯೫ | ೯೬.೨೦ |
| | ಮುಸ್ಲಿಮರು | ೨.೫೧ | ೩.೪೪ | ೨.೦೨ | ೨.೫೩ |
| | ಕ್ರಿಶ್ಚಿಯನ್ನರು | ೧.೨೫ | ೦ | ೨.೦೨ | ೧.೨೬ |
| ಜಾತಿ | ಪರಿಶಿಷ್ಟ ಜಾತಿ | ೧೬.೩೫ | ೨೫.೮೬ | ೧೧.೧೧ | ೧೬.೪೫ |
| | ಪರಿಶಿಷ್ಟ ಪಂಗಡ | ೭.೫೪ | ೧೦.೩೪ | ೧೧.೧೧ | ೯.೧೭ |
| | ಇತರ ಹಿಂದುಳಿದ ಜಾತಿ | ೭೧.೬೯ | ೬೦.೩೪ | ೬೮.೬೮ | ೬೮.೬೭ |
| | ಸಾಮಾನ್ಯ | ೦.೬೨ | ೦ | ೫.೦೫ | ೧.೮೯ |
| | ಧಾರ್ಮಿಕ ಅಲ್ಪಸಂಖ್ಯಾತರು | ೬.೦೦ | ೩.೪೪ | ೪.೦೪ | ೩.೭೯ |
| ವಿದ್ಯಾಭ್ಯಾಸ | ನಿರಕ್ಷರಸ್ಥರು | ೬೯.೧೮ | ೫೧.೭೨ | ೭೦.೭೦ | ೬೬.೪೫ |
| | ಪ್ರಾಥಮಿಕ ಶಿಕ್ಷಣ | ೧೫.೭೨ | ೧೫.೫೧ | ೧೪.೧೪ | ೧೫.೫೦ |
| | ಮಾಧ್ಯಮಿಕ ಶಿಕ್ಷಣ | ೧೪.೪೬ | ೩೧.೦೩ | ೧೪.೧೪ | ೧೭.೪೦ |
| | ೧೨ನೇ ತರಗತಿಯವರೆಗೆ | ೦.೬೨ | ೦ | ೧.೦೧ | ೦.೯೪ |
| ಒಟ್ಟು | | ೫೦.೩೧ | ೧೮.೩೫ | ೩೧.೩೨ | ೧೦೦ |
| | | ಎನ್=೫೮ | ಎನ್=೯೯ | ಎನ್=೩೧೬ | ಎನ್–೧೫೯ |

ಟಿಪ್ಪಣಿ: ಕಂಸಗಳ ಒಳಗೆ ಇರುವ ಸಂಖ್ಯೆಗಳು ವಾಸ್ತವ ದತ್ತಾಂಶದಾರರ ಸಂಖ್ಯೆಯನ್ನು ಸೂಚಿಸುತ್ತವೆ.

**ವ್ಯಾಪಾರದ ಕಾರ್ಯ ರೀತಿ:** ಮಹಿಳಾ ಬೀದಿ ಬದಿ ವ್ಯಾಪಾರಿಗಳು ತಮ್ಮ ಸರಕುಗಳಾದ ತರಕಾರಿಗಳು, ಹೂವುಗಳು, ಹಣ್ಣುಗಳು ಇತ್ಯಾದಿಗಳನ್ನು ರಸ್ತೆ ಬದಿಯಲ್ಲಿ ನೆಲದ ಮೇಲೆ ಹಾಕಿಕೊಂಡಾಗಲೀ ಅಥವಾ ತಳ್ಳುಗಾಡಿಯ ಮೇಲೆ ಇಟ್ಟುಕೊಂಡಾಗಲೀ ಮಾರಾಟ ಮಾಡುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಗಮನಿಸಿದ ಪ್ರಕಾರ ಮೂರನೆಯ ಒಂದು ಭಾಗದಷ್ಟು ವ್ಯಾಪಾರಿಗಳು (ಶೇ.೩೯) ನೆಲದ ಮೇಲೆ ಕುಳಿತುಕೊಂಡು ವ್ಯಾಪಾರ ಮಾಡುತ್ತಿದ್ದರು.ಉಳಿದಂತೆ ಸುಮಾರು ಅರ್ಧದಷ್ಟು ವ್ಯಾಪಾರಿಗಳು (ಶೇ.೪೮) ತಳ್ಳುಗಾಡಿಯನ್ನು ಇಟ್ಟುಕೊಂಡಿದ್ದರು ಮತ್ತು ಉಳಿದ ಶೇ.೧೩ ರಷ್ಟು ವ್ಯಾಪಾರಿಗಳು ಪ್ಲಾಸ್ಟಿಕ್ ಅಥವಾ ಮರದ ಹಲಗೆಗಳಿಂದ ಮಾಡಿದ ಸಣ್ಣ ಪೆಟ್ಟಿಗೆಗಳ ಮೇಲೆ ಕುಳಿತುಕೊಂಡು ಮಾರಾಟಕ್ಕೆ ಸುಲಭವಾಗುವಂತೆ ಅದೇ ರೀತಿಯ ಡಬ್ಬಗಳ ಮೇಲೆ ತಮ್ಮ ಸರಕನ್ನಿಟ್ಟುಕೊಂಡಿದ್ದರು.ಈಚಿನ ದಿನಗಳಲ್ಲಿ ತಳ್ಳುಗಾಡಿ ವ್ಯಾಪಾರಿಗಳ ಸಂಖ್ಯೆ ಜಾಸ್ತಿಯಾಗಿದ್ದು, ತಮ್ಮಲ್ಲಿಯೇ ಉಂಟಾಗುವ ಮಾರಾಟ ಸ್ಪರ್ಧೆಯಲ್ಲಿ ಜಯಿಸಲು ವಿವಿಧ ಕಾರ್ಯರೀತಿಗಳನ್ನು ಅನುಸರಿಸುತ್ತಿದ್ದರು.

**ಧನ ಸಹಾಯ:** ಮಹಿಳಾ ರಸ್ತೆ ಬದಿವ್ಯಾಪಾರಿಗಳಿಗೆ ಪ್ರತಿದಿನವೂ ತಮ್ಮ ವ್ಯಾಪಾರವನ್ನು ಪ್ರಾರಂಭಿಸಲು ಕುಟುಂಬದ ಸದಸ್ಯರು, ಸ್ನೇಹಿತರು ಹಾಗೂ ನೆರೆಹೊರೆಯವರು ನೀಡುವ ನೆರವು ಸಹಕಾರಿಯಾಗಿ ಕಂಡು ಬಂದಿದೆ. ಕುಟುಂಬದ ಸದಸ್ಯರು ನೀಡುವ ಧನಸಹಾಯವು ಹಣ್ಣಿನ ವ್ಯಾಪಾರಿಗಳಿಗೆ ಶೇ೩೭.೯೩ ರಷ್ಟು, ತರಕಾರಿ ವ್ಯಾಪಾರಿಗಳಿಗೆ ಶೇ.೩೫.೪೪ರಷ್ಟು ಮತ್ತು ಹೂವಿನ ವ್ಯಾಪಾರಿಗಳಿಗೆ ಶೇ೩೩.೩೩ ರಷ್ಟಿತ್ತು.ಆದರೆ, ತರಕಾರಿ ಮಾರುವ ರಸ್ತೆಬದಿ ಮಹಿಳಾ ವ್ಯಾಪಾರಿಗಳಿಗೆ ಸಂಬಂಧಿಕರು, ಸ್ನೇಹಿತರು ಹಾಗೂ ನೆರೆಹೊರೆಯವರು ಮಾಡುವ ಧನ ಸಹಾಯವು (ಶೇ.೩೧.೪೪), ಹಣ್ಣಿನ ವ್ಯಾಪಾರಿಗಳಿಗೆ (ಶೇ೨೫.೮೬) ಮತ್ತು ಹೂವಿನವ್ಯಾಪಾರಿಗಳಿಗೆ (ಶೇ.೩೧.೩೧) ಸಿಗುತ್ತಿದ್ದುದಕ್ಕಿಂತ ಜಾಸ್ತಿಯಿತ್ತು.ಖಾಸಗಿಯಾಗಿ ಧನ ಸಹಾಯ ಮಾಡುವವರಿಂದ ಹಣ್ಣಿನ ವ್ಯಾಪಾರಿಗಳು (ಶೇ.೨೦.೬೮), ಹೂವಿನ ವ್ಯಾಪಾರಿಗಳು (ಶೇ.೧೮.೧೮) ಹಾಗೂ ತರಕಾರಿ ವ್ಯಾಪಾರಿಗಳಿಗಿಂತ (ಶೇ.೮.೮೦) ಹೆಚ್ಚಿನ ಸಾಲ ಪಡೆದುಕೊಂಡಿದ್ದರು.

ಮಹಿಳಾ ವ್ಯಾಪಾರಿಗಳ ಪೈಕಿ ಸುಮಾರು ಶೇ.೧೩ ರಷ್ಟು ಜನರು ಖಾಸಗಿಯಾಗಿ ಧನ ಸಹಾಯ ಮಾಡುವ ಸ್ಥಳೀಯರಿಂದ ಸಾಲವನ್ನು ಪಡೆದುಕೊಂಡಿದ್ದರು.ಈ ಸಾಲಕ್ಕೆ ಅಧಿಕವಾಗಿ ಬಡ್ಡಿಯನ್ನು ವಿಧಿಸಲಾಗುತ್ತದಾದರೂ ಸಹ, ಸಾಲ ಪಡೆದ ವ್ಯಾಪಾರಿಗಳು ಅದನ್ನು ಸಮರ್ಥಿಸಿಕೊಂಡರು.ಏಕೆಂದರೆ, ಈ ಸಾಲಕ್ಕೆ ಜಾಮೀನು ಬೇಕಾಗದೆ ಸುಲಭವಾಗಿ ಸಿಗುತ್ತದೆ.ಇದೂ ಅಲ್ಲದೆ, ಈ ಸಾಲ ನೀಡುವವರು ಮಹಿಳಾ ವ್ಯಾಪಾರಿಗಳು ಇರುವಲ್ಲಿಗೇ ಬಂದು ಸಾಲವನ್ನು ನೀಡುತ್ತಾರಲ್ಲದೆ, ವಸೂಲಿಯನ್ನೂ ಇವರಿದ್ದಲ್ಲಿಗೇ ಬಂದು ಮಾಡಿಕೊಂಡು ಹೋಗುತ್ತಾರೆ.ಈ ರೀತಿಯ ಸಾಲ ನೀಡುವವರು ಮಹಿಳಾ ವ್ಯಾಪಾರಿಗಳ ಬಗ್ಗೆ ಕರುಣೆ ಉಳ್ಳವರೇ ಆಗಿರುತ್ತಾರಾದರೂ ಸಹ, ಸಾಲವನ್ನು ಸರಿಯಾದ ಸಮಯಕ್ಕೆ ತೀರಿಸದಿದ್ದ ಪಕ್ಷದಲ್ಲಿ ಬೈಗಳು, ಹೊಡೆತ, ಹೆಚ್ಚಿನ ಬಡ್ಡಿ ವಿಧಿಸುವಿಕೆ ಇತ್ಯಾದಿಗಳನ್ನು ಮಾಡುತ್ತಾರೆ.ಬ್ಯಾಂಕುಗಳಿಂದ ಸಾಲ ಪಡೆದ ಮಹಿಳಾ ವ್ಯಾಪಾರಿಗಳು ಬಹಳವೇ ಕಡಿಮೆ ಎನ್ನಬಹುದು.ಬ್ಯಾಂಕುಗಳು ಅವುಗಳ ಕಾರ್ಯನೀತಿಗೆ ಬದ್ಧವಾಗಿರಬೇಕಾಗುತ್ತದೆ ಮತ್ತು ಹೆಚ್ಚಿನ ಮಹಿಳಾ ವ್ಯಾಪಾರಿಗಳಿಗೆ ಬ್ಯಾಂಕುಗಳ ಷರತ್ತುಗಳನ್ನು ಪೂರೈಸಲು ಕಷ್ಟವಾಗುತ್ತದೆ.ಇದೂ ಅಲ್ಲದೆ, ಬ್ಯಾಂಕುಗಳ ಕಾರ್ಯನೀತಿಗಳ ಬಗ್ಗೆ ಸರಿಯಾಗಿ ಗೊತ್ತಿರದಿರುವುದು ಹಾಗೂ ಅಲ್ಲಿನ ಮುಜುಗರದ ಕಾರ್ಯವಿಧಾನಗಳು ಈ ಮಹಿಳಾ ವ್ಯಾಪಾರಿಗಳನ್ನು ಅಲ್ಲಿಗೆ ಹೋಗಲು ಹಿಂಜರಿಯುವಂತೆ ಮಾಡುತ್ತವೆ. ಈ ವ್ಯಾಪಾರಿಗಳ ಅನಕ್ಷರತೆಯು ಕೂಡಾ ಬ್ಯಾಂಕಿಗೆ ಹೋಗಲು ಒಂದು ಪ್ರತಿಬಂಧಕವಾಗಿ ಪರಿಣಮಿಸುತ್ತದೆ. ಜೊತೆಗೆ ಈ ವ್ಯಾಪಾರಿಗಳು ಸ್ತ್ರೀಯರಾದ್ದರಿಂದ, ಪೂರಕ ಜಾಮೀನು ಒದಗಿಸುವುದು ಇವರಿಗೆ ಕಷ್ಟಸಾಧ್ಯವಾಗಿದ್ದು, ಈ ಕಾರಣದಿಂದಲೂ ಅವರುಗಳು ಬ್ಯಾಂಕಿನ ಸಾಲ ಪಡೆಯಲು ಕಷ್ಟವಾಗುತ್ತಿದೆ.

**ಗಳಿಕೆ ಮತ್ತು ಆದಾಯ:** ಈ ಅಧ್ಯಯನದಲ್ಲಿ ಲೆಕ್ಕ ಹಾಕಿರುವ ಮಹಿಳಾ ರಸ್ತೆಬದಿ ವ್ಯಾಪಾರಿಗಳ ಗಳಿಕೆ ಮತ್ತು ಆದಾಯಗಳು ಕಚ್ಚಾ ಅಂದಾಜುಗಳು ಮಾತ್ರ ಆಗಿವೆ.ಏಕೆಂದರೆ ಈ ವ್ಯಾಪಾರಿಗಳು ತಮ್ಮ ವ್ಯಾಪಾರಕ್ಕಾಗಿ ದಿನನಿತ್ಯವೂ ಬಂಡವಾಳವನ್ನು ಹೂಡಬೇಕಾಗುತ್ತಲ್ಲದೆ, ಬರುವ ಆದಾಯದಲ್ಲಿ ಕುಟುಂಬವನ್ನೂ ಸಲಹಬೇಕಾಗಿರುತ್ತದೆ.ಇವರುಗಳ ಗಳಿಕೆಯು ದಿನವೊಂದಕ್ಕೆ ೫೦೦ ರೂಗಳಿಂದ ೧೫೦೦ ರೂಗಳವರೆಗೂ ಇರುತ್ತದೆ.ಆದರೂ ಸಹ, ಬಹಳಷ್ಟು ವ್ಯಾಪಾರಿಗಳು ದಿವಸವೊಂದಕ್ಕೆ ೩೦೦ ರೂಗಳಿಂದ ೫೦೦ ರೂಗಳವರೆಗೆ ದುಡಿಯುತ್ತಾರೆ.ಆ ಪೈಕಿ ಹಣ್ಣು ಮತ್ತು ತರಕಾರಿ ವ್ಯಾಪಾರಿಗಳಿಗಿಂತ ಹೂವಿನ ವ್ಯಾಪಾರಿಗಳು ಕಡಿಮೆ ಗಳಿಸುವುದು ಕಂಡುಬಂದಿದೆ. ಆದರೆ ಹಣ್ಣು ಮತ್ತು ತರಕಾರಿಗಳ ಮೇಲೆ ಹೂಡುವ ಬಂಡವಾಳವು ಹೂವಿನ ಮೇಲೆ ಹೂಡುವ ಬಂಡವಾಳಕ್ಕಿಂತ ಜಾಸ್ತಿ ಇರುತ್ತದೆ.ಈ ವ್ಯಾಪಾರಿಗಳಲ್ಲಿ ಬಹುಪಾಲು ಮಂದಿ ತಿಂಗಳಿಗೆ ೨೦ ಸಾವಿರ ರೂಗಳವರೆಗೆ ಸಂಪಾದಿಸುತ್ತಾರೆ.ವ್ಯಾಪಾರಿಗಳ ಗಳಿಕೆಯು ಅವರು ಮಾರಾಟ ಮಾಡುವ ವಸ್ತುಗಳ ಪ್ರಮಾಣದ ಮೇಲೂ ಅವಲಂಬಿತವಾಗಿರುತ್ತದೆ.

ರಸ್ತೆಬದಿ ಮಹಿಳಾ ವ್ಯಾಪಾರಿಗಳ ಕೆಲವೊಂದು ಸರಕುಗಳು ಎರಡರಿಂದ ಮೂರು ದಿವಸಗಳವರೆಗೆ ಮಾರಾಟವಾಗುತ್ತದೆ.ಕೆಲವೊಂದು ಹಣ್ಣುಗಳನ್ನು ಒಂದು ವಾರದವರೆಗೆ ಮಾರಾಟ ಮಾಡಬಹುದಾಗಿದೆ.ಬಹಳಷ್ಟು ವ್ಯಾಪಾರಿಗಳು ಬಂಡವಾಳ ಹೂಡಿಕೆ ಹಾಗೂ ಕೌಟುಂಬಿಕ ಖರ್ಚು ಇವೆರಡನ್ನೂ ದಿನನಿತ್ಯದ ಗಳಿಕೆಯಿಂದಲೇ ಮಾಡಬೇಕಾಗಿದೆ.ಹೀಗಾಗಿ ಬಂಡವಾಳ ಹೂಡಿಕೆ ಹಾಗೂ ಖರ್ಚುಗಳ ನಡುವೆ ಹೆಚ್ಚಿನ ಅಂತರವೇನೂ ಕಾಣಿಸುವುದಿಲ್ಲ.ಇದರಿಂದಾಗಿ ಈ ವ್ಯಾಪಾರಿಗಳ ಬಂಡವಾಳ ಹೂಡಿಕೆ ಹಾಗೂ ಆದಾಯಗಳನ್ನು ನಿಖರವಾಗಿ ಲೆಕ್ಕ ಹಾಕಲು ಕಷ್ಟವಾಗುತ್ತದೆ.

ಈ ವ್ಯಾಪಾರಿಗಳು ಗಳಿಸುವುದು ಕಡಿಮೆಯದರೂ ಸಹ, ಕೆಲವು ವ್ಯಾಪಾರಿಗಳು ಮುಂದಿನ ಜೀವನಕ್ಕಾಗಿ ಹಾಗೂ ಅನಿಶ್ಚಿತ ಆಕಸ್ಮಿಕಗಳಿಗಾಗಿ ತಮ್ಮ ಗಳಿಕೆಯ ಸ್ವಲ್ಪ ಪಾಲನ್ನು ಮೀಸಲಿಡುತ್ತಾರೆ.ಈ ರೀತಿ ಉಳಿಸುವ ಹಣವನ್ನು ಅವರು ಮುಖ್ಯವಾಗಿ ಪಿಗ್ಮಿ ಮತ್ತು ಜೀವವಿಮೆಗಳಲ್ಲಿ (ಎಲ್ಐಸಿ) ತೊಡಗಿಸುತ್ತಾರೆ.

**ಕರ್ತವ್ಯದ ಸ್ಥಳಗಳಲ್ಲಿ ಎದುರಾಗುವ ಸಮಸ್ಯೆಗಳು:** ಸಾಮಾನ್ಯವಾಗಿ ಈ ವ್ಯಾಪಾರಿಗಳಿಗೆ ರಸ್ತೆಯಲ್ಲಿ ಸಾಗುವ ವಾಹನಗಳಿಂದ ಹಾಗೂ ಪಾದಚಾರಿಗಳಿಂದ ಹೆಚ್ಚು ಅಡಚಣೆ ಉಂಟಾಗುತ್ತಿರುತ್ತದೆ. ಹೂವು ಮತ್ತು ಹಣ್ಣಿನ ವ್ಯಾಪಾರಿಗಳು ಸಾಮಾನ್ಯವಾಗಿ ಒಂದೇ ಜಾಗಕ್ಕೆ ಸೀಮಿತಗೊಳ್ಳುತ್ತಾರೆ. ಹಣ್ಣಿನ ವ್ಯಾಪಾರಿಗಳು ಏಕೆ ತಿರುಗಾಡಿ ವ್ಯಾಪಾರ

ಮಾಡುವುದಿಲ್ಲವೆಂದರೆ, ತಿರುಗಾಡುವಾಗ ಹಣ್ಣುಗಳು ಸೂರ್ಯನ ಶಾಖಕ್ಕೆ ಬಾಡುತ್ತವೆ. ಹೂವುಗಳನ್ನು ಪೋಣಿಸುವ ಕೆಲಸದಲ್ಲಿ ಅಡಚಣೆ ಉಂಟಾಗಬಾರದೆಂದು ಹೂವಿನ ವ್ಯಾಪಾರಿಗಳು ಕುಳಿತಲ್ಲಿಯೇ ಕುಳಿತಿರುತ್ತಾರೆ. ತರಕಾರಿ ವ್ಯಾಪಾರಿಗಳು ಮಾತ್ರ ಸಾಮಾನ್ಯವಾಗಿ ರಸ್ತೆಗಳಲ್ಲಿ ತಿರುಗಾಡುತ್ತಿರುತ್ತಾರೆ ಮತ್ತು ಎಲ್ಲೆಲ್ಲಿ ಸೂಕ್ತವೆಂದು ಕಂಡು ಬರುತ್ತದೆಯೋ, ಅಲ್ಲಲ್ಲಾ ಗಾಡಿಗಳನ್ನು ನಿಲ್ಲಿಸಿಕೊಂಡಿರುತ್ತಾರೆ. ಹೀಗೆ ಮಾಡುವಾಗ ಅವರಿಗೆ ರಸ್ತೆಯಲ್ಲಿ ಸಾಗುವ ವಾಹನಗಳಿಂದ ಮತ್ತು ಪಾದಚಾರಿಗಳಿಂದ ತೊಂದರೆ ಆಗಬಹುದಾಗಿದೆ.ಹೆಚ್ಚಿನ ರಸ್ತೆಬದಿ ಮಹಿಳಾ ವ್ಯಾಪಾರಿಗಳು ಮನೆ ಮಾಲಿಕರು, ಅಂಗಡಿಗಳವರು ಹಾಗೂ ದೇವಸ್ಥಾನಗಳ ಆಡಳಿತವರ್ಗದವರ ಸಹಕಾರವನ್ನು ಪಡೆಯುವುದು ಕುತೂಹಲಕರ ಸಂಗತಿಯಾಗಿದೆ.ಆದರೆ ಇದೇ ರೀತಿಯ ಸಹಕಾರವನ್ನು ಅವರು ಪೋಲೀಸರಿಂದ ಹಾಗೂ ಬಿಬಿಎಂಪಿ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ) ಅಧಿಕಾರಿಗಳಿಂದ ಪಡೆಯಲು ಸಾಧ್ಯವಾಗುತ್ತಿಲ್ಲ.

ರಸ್ತೆಬದಿ ಮಹಿಳಾ ವ್ಯಾಪಾರಿಗಳು ಸಾಮಾನ್ಯವಾಗಿ ಪೋಲೀಸರು ಮತ್ತು ಬಿಬಿಎಂಪಿ ಸಿಬ್ಬಂದಿಯಿಂದ ಸಮಸ್ಯೆಗಳನ್ನು ಎದುರಿಸುತ್ತಾರೆ.ಏಕೆಂದರೆ ಈ ವ್ಯಾಪಾರಿಗಳು ತಮ್ಮ ವ್ಯಾಪಾರಕ್ಕಾಗಿ ಸಾರ್ವಜನಿಕ ಸ್ಥಳಗಳನ್ನು ಆಕ್ರಮಿಸಿಕೊಳ್ಳುತ್ತಾರೆ.ಸಾರ್ವಜನಿಕರೂ ಸಹ ಈ ಆಕ್ರಮಿಕೆಯನ್ನು ಆಕ್ಷೇಪಿಸುತ್ತಾರೆ.ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ ಮತ್ತು ಪಾದಚಾರಿ ಮಾರ್ಗದಲ್ಲಿ ಓಡಾಡಲು ತೊಂದರೆ ಆಗುತ್ತದೆಂದು ಪೋಲೀಸರು ಮತ್ತು ಬಿಬಿಎಂಪಿ ಸಿಬ್ಬಂದಿ ಈ ವ್ಯಾಪಾರಿಗಳನ್ನು ಆಗಾಗ ಅಲ್ಲಿಂದ ಎಬ್ಬಿಸುತ್ತಿರುತ್ತಾರೆ. ಆದರೆ ಈ ಬಡವ್ಯಾಪಾರಿಗಳು ಅದನ್ನು ಸಹಿಸಿಕೊಂಡೇ ಮತ್ತೆ ಅಲ್ಲೇ ವ್ಯಾಪಾರವನ್ನು ಪುನರಾರಂಭಿಸುತ್ತಾರೆ.ಒಟ್ಟಿನಲ್ಲಿ ರಸ್ತೆಬದಿಯ ವ್ಯಾಪಾರವು ಸಾರ್ವಜನಿಕ ಅಧಿಕಾರಿಗಳು ಮತ್ತು ವ್ಯಾಪಾರಿಗಳ ನಡುವೆ ಸಂಘರ್ಷಗಳನ್ನು ಉಂಟು ಮಾಡುತ್ತಿರುತ್ತದೆ.ಈ ರೀತಿಯ ರಸ್ತೆಬದಿಯ ವ್ಯಾಪಾರ ಮಾಡಲು ಪರವಾನಿಗೆಯನ್ನು ಪಡೆಯುವುದನ್ನು ಕಡ್ಡಾಯ ಮಾಡಿಲ್ಲ ಎನ್ನುವುದನ್ನು ನಾವು ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ರಸ್ತೆಬದಿಯಲ್ಲಿ ವ್ಯಾಪಾರಿ ಮಾಡುವ ಸುಮಾರು ನಾಲ್ಕನೆಯ ಒಂದು ಭಾಗದಷ್ಟು ಮಹಿಳಾ ವ್ಯಾಪಾರಿಗಳು ಬಿಬಿಎಂಪಿ ಸಿಬ್ಬಂದಿ ಮತ್ತು ಪೋಲೀಸರಿಂದ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸುಮಾರು ಶೇ.೧೨ ರಷ್ಟು ಜನರು ವ್ಯಾಪಾರದ ಸ್ಥಳದಿಂದ ಎತ್ತಂಗಡಿಯಾಗುತ್ತಾರೆ. ಕೆಲವು ಮಹಿಳಾ ವ್ಯಾಪಾರಿಗಳು ಈ ಅಧಿಕಾರಿ ಸಿಬ್ಬಂದಿಗೆ ನಗದು ರೂಪದಲ್ಲಾಗಲೀ ಅಥವಾ ಸರಕು ರೂಪದಲ್ಲಾಗಲೀ ಲಂಚವನ್ನು ಕೊಟ್ಟು ಎತ್ತಂಗಡಿಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರಾದರೂ ಸಹ, ಹೆಚ್ಚೂ ಕಡಿಮೆ ಎಲ್ಲಾ ವ್ಯಾಪಾರಿಗಳೂ ಸಹ ಪಟ್ಟಿ ೨ ರಲ್ಲಿ ನೀಡಿರುವಂತಹ ವಿವಿಧ ಕಾರಣಗಳಿಗಾಗಿ ಅನಿಶ್ಚಿತತೆಯನ್ನು ಎದುರಿಸುತ್ತಲೇ ಇದ್ದಾರೆ.

**ಪಟ್ಟಿ ೨: ಅನಿಶ್ಚಿತತೆಯನ್ನು ಎದುರಿಸುತ್ತಿರುವ ಮಹಿಳಾ ವ್ಯಾಪಾರಿಗಳ ಶೇಕಡವಾರು ಪ್ರಮಾಣ**

| ಅನಿಶ್ಚಿತತೆಗೆ ಕಾರಣಗಳು | ವ್ಯಾಪಾರಿ ವರ್ಗ | | | |
|---|---|---|---|---|
| | ಹೂವಿನ ವ್ಯಾಪಾರಿಗಳು | ಹಣ್ಣಿನ ವ್ಯಾಪಾರಿಗಳು | ತರಕಾರಿ ವ್ಯಾಪಾರಿಗಳು | ಒಟ್ಟು |
| ನಗರ ಪಾಲಿಕೆ/ ಪೋಲೀಸ್/ಸಾರ್ವಜನಿಕರು | ೩೬.೩೬ | ೩೨.೭೫ | ೪೨.೧೩ | ೩೮.೬೦ |
| ಮೆಟ್ರೋ ನಿರ್ಮಾಣ | ೪೪.೪೪ | ೩.೪೪ | ೩೫.೮೪ | ೪೦.೮೨ |
| ಅಪಾರ್ಟ್‌ಮೆಂಟ್/ಕಟ್ಟಡಗಳ ನಿರ್ಮಾಣ | ೮.೦೮ | – | ೫.೬೬ | ೫.೩೭ |
| ಅಂಗಡಿ ಮಾಲಿಕರು | ೨.೦೨ | ೫.೧೭ | ೩.೭೭ | ೩.೪೮ |
| ಮೆಟ್ರೋ ಮತ್ತು ನಗರ ಪಾಲಿಕೆ | ೨.೦೨ | ೧೦.೩೪ | ೧.೮೮ | ೩.೪೮ |
| ಸುಮ್ಮಸುಮ್ಮನೆ | ೨.೦೨ | ೧೦.೩೪ | ೪೨.೧೩ | ೩.೪೮ |
| ಒಟ್ಟು* | ೩೧.೩೨ (ಎನ್ = ೯೯) | ೧೮.೩೫ (ಎನ್ = ೫೮) | ೫೦.೩೧ (ಎನ್ = ೧೫೯) | ೧೦೦ (ಎನ್ = ೩೧೬) |

* ಟಿಪ್ಪಣಿ: ಕಂಸದೊಳಗಿರುವ ಸಂಖ್ಯೆಗಳು ಮಹಿಳಾ ವ್ಯಾಪಾರಿಗಳ ವಾಸ್ತವ ಸಂಖ್ಯೆಯಾಗಿರುತ್ತದೆ

**ಮಹಿಳಾ ವ್ಯಾಪಾರಿಗಳ ಆರೋಗ್ಯ ವಿಚಾರಗಳು:** ರಸ್ತೆ ಬದಿಯ ಮಹಿಳಾ ವ್ಯಾಪಾರಿಗಳು ಸಾರ್ವಜನಿಕ ಸ್ಥಳಗಳನ್ನೇ ಆಕ್ರಮಿಸದೆ ಬೇರೆ ಗತಿಯಿಲ್ಲದಿರುವುದರಿಂದ, ಅವರುಗಳಿಗೆ ತಮ್ಮ ವ್ಯಾಪಾರ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳಲು ಅತಿ ಕಡಿಮೆ ಅವಕಾಶಗಳಿರುತ್ತವೆ. ವ್ಯಾಪಾರಿಗಳು ಉಪಯೋಗಿಸುವ ಕೆಲವು ಸ್ಥಳಗಳ ಹಿಂದೆ ಚರಂಡಿ ನೀರು ಹರಿಯುತ್ತಿರುತ್ತದೆ. ಅನೇಕರು ರಸ್ತೆ ಬದಿಯಲ್ಲಿ ಅಥವಾ ಪಾದಚಾರಿ ಮಾರ್ಗದಲ್ಲಿ ವಾಹನಗಳ ಸಂಚಾರದ ನಡುವೆಯೇ ಕುಳಿತು ಸಂಚರಿಸುವ ವಾಹನಗಳ ಹೊಗೆಯನ್ನು ಕುಡಿಯುತ್ತಲೇ ವ್ಯಾಪಾರವನ್ನು ಮಾಡುತ್ತಿರುತ್ತಾರೆ. ರಸ್ತೆ ಬದಿ ವ್ಯಾಪಾರವು ಹೆಚ್ಚಿನ ಶ್ರಮವನ್ನು ಅಪೇಕ್ಷಿಸುತ್ತದೆ. ಜೊತೆಗೆ ಕಠಿಣವಾದ ದೈಹಿಕ ಶ್ರಮವೂ ಉಂಟಾಗುತ್ತದೆ. ಇದರಿಂದಾಗಿ ಮಹಿಳೆಯರು ಸಾಮಾನ್ಯವಾಗಿ ಸುಸ್ತಾಗಿಬಿಡುತ್ತಾರೆ ಮತ್ತು ವಿವಿಧ ಆರೋಗ್ಯ ಸಮಸ್ಯೆಗಳಿಗೆ ಈಡಾಗುತ್ತಾರೆ. ಇವುಗಳಿಗೆ ಪೂರಕವಾಗಿ ತೆರೆದ ಸಾರ್ವಜನಿಕ ಸ್ಥಳಗಳಲ್ಲಿನ ಹೆಚ್ಚಿನ ಮಾಲಿನ್ಯದ ಮಟ್ಟವು ರಸ್ತೆ ಬದಿ ವ್ಯಾಪಾರಿಗಳ ಕಳಪೆ ಆರೋಗ್ಯ ಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ.

ಸಾಮಾನ್ಯವಾಗಿ ರಸ್ತೆ ಬದಿ ವ್ಯಾಪಾರಿಗಳು ದೀರ್ಘಾವಧಿಯಲ್ಲಿ ದಿವಸಕ್ಕೆ ಎಂಟು ಗಂಟೆಗಳಿಗೂ ಹೆಚ್ಚಿನ ಕಾಲ ತೆರೆದ ಸ್ಥಳಗಳಲ್ಲಿಯೇ ಕೆಲಸ ಮಾಡುತ್ತಾರೆ. ಪ್ರಸ್ತುತ ಅಧ್ಯಯನದ ಫಲಿತಾಂಶಗಳ ಪ್ರಕಾರ ಶೇ.೧೮.೬೭ ರಷ್ಟು ಮಹಿಳಾ ವ್ಯಾಪಾರಿಗಳು ಕೆಲಸಕ್ಕೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.



ಮಲ್ಲೇಶ್ವರದ ಪಾದಚಾರಿ ಮಾರ್ಗದಲ್ಲಿ ಸ್ಟ್ಯಾಂಡುಗಳ ಮೇಲೆ ಹೂವುಗಳನ್ನು ಇಟ್ಟು ಮಾರಾಟ ಮಾಡುತ್ತಿರುವುದು



ಗಾಂಧಿ ಬಜಾರಿನ ರಸ್ತೆ ಬದಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿರುವುದು

ಈ ರಸ್ತೆ ಬದಿ ಮಹಿಳಾ ವ್ಯಾಪಾರಿಗಳು ಅತಿ ಸಾಮಾನ್ಯವಾಗಿ ಎದುರಿಸುವ ಆರೋಗ್ಯ ಸಮಸ್ಯೆಗಳೆಂದರೆ ಪದೇ ಪದೇ ಕಾಡುವ ತಲೆನೋವು, ಕೈ ನೋವು, ಕಾಲು ಮತ್ತು ಮಂಡಿ ನೋವು, ಬೆನ್ನು ನೋವು, ಮೈಕೈ ನೋವು ಇತ್ಯಾದಿ. ಇವುಗಳೆಲ್ಲವೂ ಅವರ ವೃತ್ತಿಗೆ ಸಂಬಂಧಿಸಿದಂತೆ ಅವರು ಮಾಡುವ ಶ್ರಮಪೂರಿತ ದೈಹಿಕ ಕೆಲಸಗಳಿಂದಾಗುತ್ತವೆ. ಈ ಸಾಮಾನ್ಯ ಆರೋಗ್ಯ ಸಮಸ್ಯೆಗಳಲ್ಲದೆ, ಅವರುಗಳು ಚಿಕುನ್‌ಗುನ್ಯಾ, ಕಾಲಿನಲ್ಲೇಳುವ ಬೊಬ್ಬೆಗಳು, ಪದೇ ಪದೇ ಕಾಡುವ ಜ್ವರ, ಹಸಿವಿಲ್ಲದಿರುವಿಕೆ ಇತ್ಯಾದಿಗಳಿಂದಲೂ ಬಳಲುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಗಮನಿಸಿರುವುದೇನೆಂದರೆ, ಯಶವಂತಪುರದ ಮಾರುಕಟ್ಟೆಯಲ್ಲಿನ ವ್ಯಾಪಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಚಿಕುನ್‌ಗುನ್ಯಾ ಮತ್ತು ಕ್ಷಯ ರೋಗಗಳಿಂದ ಬಳಲುತ್ತಾರೆ ಎಂಬುದಾಗಿದೆ. ಹೂವಿನ ವ್ಯಾಪಾರಿಗಳು ಹೂವುಗಳನ್ನು ಸತತವಾಗಿ ಪೋಣಿಸುವುದರಿಂದ ಸಾಮಾನ್ಯವಾಗಿ ಕೈನೋವಿನಿಂದ ಬಳಲುತ್ತಾರೆ. ಬಹುಪಾಲು ವ್ಯಾಪಾರಿಗಳು ತಮ್ಮ ಆರೋಗ್ಯ ಸಮಸ್ಯೆಗಳಿಗೆ ಯಾವುದೇ ಚಿಕಿತ್ಸೆಯನ್ನು ಪಡೆಯುವುದಿಲ್ಲ ಎಂಬುದನ್ನೂ ಅಧ್ಯಯನದಲ್ಲಿ ಗಮನಿಸಲಾಗಿದೆ. ಅದರ ಬದಲಾಗಿ ಅವರುಗಳು ಸ್ವಯಂ ಚಿಕಿತ್ಸೆಯನ್ನು ಮಾಡಿಕೊಳ್ಳುತ್ತಾರೆ ಮತ್ತು ಔಷಧಿ ಅಂಗಡಿಗಳವರು ನೇರವಾಗಿ ಕೊಡುವ ಔಷಧಿಗಳನ್ನು ತೆಗೆದುಕೊಳ್ಳುತ್ತಾರೆ. ವೈದ್ಯರೊಡನೆ ಸಮಾಲೋಚಿಸುವುದಕ್ಕೆ ಅವರುಗಳ ಬಳಿ ಸಾಕಷ್ಟು ದುಡ್ಡಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿರುತ್ತದೆ ಹಾಗೂ ಔಷಧಿ ಅಂಗಡಿಗಳಿಂದ ನೇರವಾಗಿ ಔಷಧಿಯನ್ನು ಪಡೆಯುವುದು ಅಗ್ಗವೆನಿಸುತ್ತದೆ.

**ಸಂಘಗಳಲ್ಲಿನ ಸದಸ್ಯತ್ವ ಮತ್ತು ಸಂಘಗಳ ಕಾರ್ಯವಿಧಾನದಲ್ಲಿನ ಲೋಪಗಳು:** ಪ್ರಸ್ತುತ ಅಧ್ಯಯನದ ಪ್ರಕಾರ ಶೇ. ೧೧ ರಷ್ಟು ವ್ಯಾಪಾರಿಗಳು ಮಾರಾಟದ ಸ್ಥಳದಲ್ಲಿನ ಒಂದಲ್ಲಾ ಒಂದು ಸಂಘದ ಸದಸ್ಯತ್ವವನ್ನು ಹೊಂದಿರುತ್ತಾರೆ. ಬಹುಪಾಲು ವ್ಯಾಪಾರಿಗಳು ಮಹಿಳಾ ಸಂಘಗಳ ಸದಸ್ಯರಾಗಿರುತ್ತಾರೆ. ಮಹಿಳಾ ವ್ಯಾಪಾರಿಗಳು ತಮ್ಮ ತಕ್ಷಣದ ಅಗತ್ಯತೆಗಳಿಗಾಗಿ ದುಡ್ಡನ್ನು ಹೆಚ್ಚಾಗಿ ಅಪೇಕ್ಷಿಸುವುದರಿಂದಾಗಿ, ಈ ಸಂಘಗಳು ಅವರುಗಳಿಗೆ ದುಡ್ಡಿನ ಬೆಂಬಲವನ್ನು ಮಾತ್ರ ನೀಡುತ್ತಿವೆ. ವ್ಯಾಪಾರಿಗಳೂ ಸಹ ಈ ಸೌಲಭ್ಯವನ್ನಪೇಕ್ಷಿಸಿಯೇ ಮಹಿಳಾ ಸಂಘಗಳ ಸದಸ್ಯರಾಗಿರುತ್ತಾರೆ. ವ್ಯಾಪಾರಿಗಳ ಪ್ರಮುಖ ಸಮಸ್ಯೆಯು ದುಡ್ಡಿನ ಅವಶ್ಯಕತೆಯೇ ಆಗಿರುವುದರಿಂದ, ಮಹಿಳಾ ಸಂಘಗಳು ಈ ರೀತಿಯ ಧನಸಹಾಯವನ್ನು ಮಾಡುವುದು ಒಂದು ಸ್ವಾಗತಾರ್ಹ ಕ್ರಮವೇ ಆಗಿರುತ್ತದೆ. ದೊರಕುವ ಧನಸಹಾಯವು ಸಗಟು ಮಾರುಕಟ್ಟೆಯಲ್ಲಿ ಆಹಾರ ಸಾಮಗ್ರಿಗಳನ್ನು ಒಟ್ಟಾಗಿ ಖರೀದಿಸುವುದಕ್ಕೂ ಮತ್ತು ಕುಟುಂಬ ನಿರ್ವಹಣೆ ಮಾಡಲು ಈ ವ್ಯಾಪಾರಿಗಳಿಗೆ ನೆರವಾಗುತ್ತದೆ. ಆದರೆ ಈ ಸಂಘಗಳು ಮಹಿಳಾ ವ್ಯಾಪಾರಿಗಳ ಚೌಕಾಸಿ ಸಾಮರ್ಥ್ಯವನ್ನು ಹೆಚ್ಚಿಸುವ ಕೆಲಸವನ್ನಾಗಲೀ ಅಥವಾ ಅದರ ತಿಳುವಳಿಕೆಯನ್ನು ಹೆಚ್ಚಿಸುವ ಕೆಲಸವನ್ನಾಗಲೀ ಮಾಡುವುದಿಲ್ಲ. ಜೊತೆಗೆ ಅವುಗಳು

ವ್ಯಾಪಾರಿಗಳ ಕುಂದುಕೊರತೆಗಳನ್ನು ಸಂಬಂಧಪಟ್ಟವರಿಗೆ ತಿಳಿಸಿ, ಅವುಗಳಿಗೆ ಪರಿಹಾರ ಸೂಚಿಸುವ ಕೆಲಸವನ್ನೂ ಮಾಡುವುದಿಲ್ಲ.

## ಸಾರಾಂಶ:

ರಸ್ತೆ ಬದಿಯ ಮಹಿಳಾ ವ್ಯಾಪಾರಿಗಳು ಕಷ್ಟಪಟ್ಟು ಕೆಲಸ ಮಾಡುವವರಾಗಿದ್ದು, ರಸ್ತೆ ಬದಿಯ ವ್ಯಾಪಾರದಿಂದಲೇ ತಮ್ಮ ಜೀವನೋಪಾಯವನ್ನು ಕಂಡುಕೊಳ್ಳುವವರಾಗಿದ್ದಾರೆ. ನಗರವು ಬೆಳೆದಂತೆಲ್ಲಾ ದಿನದಿಂದ ದಿನಕ್ಕೆ ರಸ್ತೆ ಬದಿಯ ಮಹಿಳಾ ವ್ಯಾಪಾರಿಗಳ ಸಂಖ್ಯೆಯೂ ಹೆಚ್ಚಾಗುತ್ತಿರುವಂತೆ ಭಾಸವಾಗುತ್ತದೆ. ಹೆಚ್ಚಿನ ಸಂಖ್ಯೆಯ ವ್ಯಾಪಾರಿಗಳು ಅನಕ್ಷರಸ್ಥರು ಮತ್ತು ಹಿಂದುಳಿದ ಜಾತಿಗಳಿಗೆ ಸೇರಿದವರಾಗಿರುತ್ತಾರೆ. ಅವರುಗಳು ಕಳಪೆ ಸ್ಥಿತಿಗತಿಗಳಲ್ಲಿ ಜೀವನವನ್ನು ಸಾಗಿಸುತ್ತಿದ್ದರೂ ಸಹ, ಜನರಿಗೆ ಅನುಕೂಲವಾಗುವಂತಹ ಸ್ಥಳಗಳಲ್ಲಿ ಮತ್ತು ವೇಳೆಗಳಲ್ಲಿ ಅವರುಗಳ ತರಕಾರಿ, ಹಣ್ಣು ಮತ್ತು ಹೂವುಗಳ ಅವಶ್ಯಕತೆಯನ್ನು ಪೂರೈಸುತ್ತಿದ್ದಾರೆ. ರಸ್ತೆಗಳಲ್ಲಿ ಈ ವ್ಯಾಪಾರಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೂ ಸಹ, ಈ ವ್ಯಾಪಾರಿಗಳಿಗೆ ಪರ್ಯಾಯ ಆಯ್ಕೆಗಳು ಬಹಳ ಕಡಿಮೆ ಇರುವುದರಿಂದಲೂ ಹಾಗೂ ಅವರುಗಳ ಕುಟುಂಬಗಳ ನಿರ್ವಹಣೆಯು ಇದರಿಂದಲೇ ಸಾಗಬೇಕಾಗಿರುವುದರಿಂದಲೂ, ಇದೇ ವೃತ್ತಿಯನ್ನೇ ಅವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇವರುಗಳನ್ನು ನಗರ ಪರಿಸರದಲ್ಲಿ ನೆಲೆಗೊಳಿಸಲೂ ಮತ್ತು ಜೀವನೋಪಾಯಕ್ಕೆ ಬೇಕಾದಷ್ಟು ಆದಾಯವನ್ನು ಗಳಿಸಲು ನೆರವಾಗಲೂ, ಕೆಳಕಂಡ ಕಾರ್ಯನೀತಿ ಶಿಫಾರಸ್ಸುಗಳನ್ನು ಗಮನಕ್ಕೆ ತಂದುಕೊಳ್ಳಬಹುದಾಗಿದೆ.

## ಕಾರ್ಯನೀತಿ ಶಿಫಾರಸ್ಸುಗಳು:

೧. ವ್ಯಾಪಾರಿಗಳಿಗೆ ಅನುಮತಿ ಪತ್ರವನ್ನು ಕಡ್ಡಾಯವಾಗಿ ನೀಡಬೇಕು ಮತ್ತು ಕಾಲ ಕಾಲಕ್ಕೆ ಅದನ್ನು ಪುನರ್ ನವೀಕರಿಸುತ್ತಿರಬೇಕು. ಇದರಿಂದಾಗಿ ಈ ವ್ಯಾಪಾರಿಗಳಿಗೆ ಅಸ್ಮಿತೆಯೂ ಮತ್ತು ಘನತೆಯೂ ದೊರಕುತ್ತದೆ. ಜೊತೆಗೆ, ಈ ವ್ಯಾಪಾರಿಗಳು ಅನುಮತಿ ಪತ್ರವನ್ನು ಹೊಂದುವುದರಿಂದ, ಅವರುಗಳನ್ನು ಪದೇ ಪದೇ ಎತ್ತಂಗಡಿ ಮಾಡುವುದನ್ನೂ ತಪ್ಪಿಸಬಹುದಾಗಿದೆ.

೨. ಸಾರ್ವಜನಿಕ ಉದ್ಯಾನವನಗಳು, ಬಸ್ ನಿಲ್ದಾಣಗಳು ಇತ್ಯಾದಿಗಳ ಸಮೀಪದಲ್ಲಿ ಮಹಿಳಾ ವ್ಯಾಪಾರಿಗಳಿಗೆ ಮಾರಾಟದ ಸ್ಥಳಗಳಲ್ಲಿ ಸ್ಥಳದ ಹಂಚಿಕೆ ಮಾಡುವುದು ನಗರ ಯೋಜನೆಯ ಒಂದು ಭಾಗವಾಗಬೇಕು. ಮಾರಾಟದ ಸ್ಥಳಗಳನ್ನು ಗುರುತಿಸುವಾಗ ಬಳಕೆದಾರರು ಮತ್ತು ವ್ಯಾಪಾರಿಗಳು ಇವರಿಬ್ಬರಹಿತಾಸಕ್ತಿಗಳನ್ನೂ ಗಮನಿಸಬೇಕು. ಹೀಗೆ ಮಾಡುವುದರಿಂದ ವ್ಯಾಪಾರಿಗಳನ್ನು ಪದೇ ಪದೇ ಎತ್ತಂಗಡಿ ಮಾಡುವುದನ್ನೂ ತಪ್ಪಿಸಬಹುದು ಮತ್ತು ಅವರ ಜೀವನೋಪಾಯಕ್ಕೂ ಧಕ್ಕೆ ಆಗಲಾರದು. ಈ ಕ್ರಮದಿಂದ ಸಾರ್ವಜನಿಕ ಸ್ಥಳಗಳಲ್ಲಿ ಉಂಟಾಗುವ ಜನದಟ್ಟಣೆಯನ್ನು ಪರಿಣಾಮಕಾರಿಯಾಗಿ ನಿವಾರಿಸಬಹುದಾಗಿದೆ. ರಸ್ತೆ ಬದಿ ವ್ಯಾಪಾರಿಗಳಿಗೂ ಹಾಗೂ ಪಾದಚಾರಿಗಳಿಗೂ ಉಂಟಾಗುವ ತಾಪದಾಯಕ ಸಂವಾದಗಳನ್ನೂ ಇದರಿಂದ ನಿಲ್ಲಿಸಬಹುದಾಗಿದೆ.

೩. ರಸ್ತೆಬದಿ ಮಹಿಳಾ ವ್ಯಾಪಾರಿಗಳಿಗೆ ಕಡಿಮೆ ದರದ ಬಡ್ಡಿಯ ಸಾಂಸ್ಥಿಕ ಸಾಲವನ್ನು ಕೊಡಿಸುವುದೂ ಮುಖ್ಯವಾಗುತ್ತದೆ. ಇದರಿಂದಾಗಿ ಈ ವ್ಯಾಪಾರಿಗಳನ್ನು ಅತಿ ಹೆಚ್ಚಿನ ಬಡ್ಡಿ ವಿಧಿಸಿ ಈ ಬಡ ವ್ಯಾಪಾರಿಗಳಿಗೆ ಸಾಲ ಕೊಟ್ಟು ಸುಲಿಗೆ ಮಾಡುವ ಖಾಸಗಿ ಸಾಲ ನೀಡುವವರ ಕಪಿಮುಷ್ಟಿಯಿಂದ ಬಿಡಿಸಬಹುದಾಗಿದೆ. ಈ ಅನಕ್ಷರಸ್ಥ ವ್ಯಾಪಾರಿಗಳನ್ನೂ ಬ್ಯಾಂಕಿಂಗ್ ವ್ಯವಹಾರದಲ್ಲಿ ತೊಡಗಿಸುವ ಸಲುವಾಗಿ ಬ್ಯಾಂಕಿನ ವ್ಯವಹಾರ ಕಾರ್ಯವಿಧಾನಗಳನ್ನು ಸರಳೀಕರಿಸಬೇಕಾಗಿದೆ. ಬ್ಯಾಂಕಿನ ಕಾರ್ಯವಿಧಾನವನ್ನು ಈ ವ್ಯಾಪಾರಿಗಳಿಗೆ ಅರ್ಥ ಮಾಡಿಸುವ ಸಲುವಾಗಿಯೇ ಒಂದು ಪ್ರತ್ಯೇಕ ಗವಾಕ್ಷಿಯನ್ನು ತೆರೆಯುವುದು ಒಳಿತು. ಮಹಿಳಾ ವ್ಯಾಪಾರಿಗಳು ಹೆಚ್ಚು ಹೆಚ್ಚು ಸ್ವಸಹಾಯ ಗುಂಪುಗಳನ್ನು ರಚಿಸಿಕೊಳ್ಳಲು ಪ್ರೋತ್ಸಾಹ ನೀಡಬೇಕು. ಇವರುಗಳಿಗೆ ಆರ್ಥಿಕ ವ್ಯವಹಾರಗಳ ತಿಳುವಳಿಕೆಯನ್ನು ಪ್ರಸರಿಸಲು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಇದರಿಂದಾಗಿ ಅವರುಗಳು ಖಾಸಗಿ ಸಾಲವನ್ನು ತೆಗೆದುಕೊಳ್ಳುತ್ತಿರುವುದರಿಂದಾಗಿ ಯಾವ ರೀತಿ ಶೋಷಣೆಗೆ ಒಳಗಾಗುತ್ತಿದ್ದೀವಿ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ.

೪. ಇದೇ ರೀತಿಯಲ್ಲಿಯೇ ಈ ವ್ಯಾಪಾರಿಗಳು ತಾವು ಮಾರಾಟ ಮಾಡುವ ಸ್ಥಳ ಮತ್ತು ಸುತ್ತಮುತ್ತಲಿನ ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಮಹತ್ವವನ್ನು ತಿಳಿಯಬೇಕು ಹಾಗೂ ಅದರ ಹೊಣೆಗಾರಿಕೆಯನ್ನೂ ಹೊತ್ತುಕೊಳ್ಳಬೇಕು. ಇದರಿಂದ ಎರಡು ರೀತಿಯ ಪರಿಣಾಮಗಳುಂಟಾಗುತ್ತವೆ. ಮೊದಲನೆಯದಾಗಿ ಸ್ವಚ್ಛತೆಯ ಹೊಣೆಗಾರಿಕೆಯು ಅವರು ಸಮಾಜದ ಲೆಕ್ಕಕ್ಕೆ ಸಿಗುವಂತೆ ಮಾಡುತ್ತದೆ. ನಗರದ ನಿರ್ವಹಣೆಯಲ್ಲಿ ಅವರೂ ಒಳಗೊಳ್ಳುವಂತೆ ಇದು ಮಾಡುವುದಲ್ಲದೆ, ಆ ಪರಿಸರದ ಬಗ್ಗೆ ಒಂದು ಬಾಂಧವ್ಯವೂ ಬೆಳೆಯುವಂತೆ ಮಾಡುತ್ತದೆ. ಎರಡನೆಯದಾಗಿ ಈ ಸ್ವಚ್ಛ ಪರಿಸರವು ಅವರ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮವನ್ನೂ ಉಂಟು ಮಾಡುತ್ತದೆ. ಇವುಗಳಿಂದಾಗಿಯೂ ನಗರದ ಸ್ವಚ್ಛತೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ.

೫. ಈ ರಸ್ತೆ ಬದಿ ಮಹಿಳಾ ವ್ಯಾಪಾರಿಗಳನ್ನು ಪಾದಚಾರಿಗಳ ಸುರಕ್ಷತೆಯ ಬಗ್ಗೆಯೂ ಮತ್ತು ವಾಹನಗಳ ಸುಗಮ ಸಂಚಾರದ ಬಗ್ಗೆಯೂ ಹೊಣೆಗಾರರನ್ನಾಗಿ ಮಾಡುವುದೂ ಸಹ ಬಹಳ ಮುಖ್ಯವಾಗುತ್ತದೆ. ಇದು ದಿನನಿತ್ಯ ಈ ವ್ಯಾಪಾರಿಗಳಿಗೂ ಮತ್ತು ಸಾರ್ವಜನಿಕ ಅಧಿಕಾರಿಗಳಿಗೂ ನಡೆಯುವ ತಿಕ್ಕಾಟವನ್ನು ತಪ್ಪಿಸಬಹುದಾಗಿದೆ. ಈ ಕ್ರಮವು ವ್ಯಾಪಾರಿಗಳನ್ನು ಅವರ ಸರಕುಗಳನ್ನು ವ್ಯವಸ್ಥಿತವಾಗಿ ಜೋಡಿಸಿಟ್ಟುಕೊಳ್ಳಲು ಪ್ರೋತ್ಸಾಹಿಸುವುದಲ್ಲದೆ, ಪಾದಚಾರಿಗಳಿಗೆ ತೊಂದರೆ ಉಂಟಾಗುವುದನ್ನೂ ಮತ್ತು ಸಂಚಾರಕ್ಕೆ ಅಡಚಣೆ ಆಗುವುದನ್ನೂ ತಪ್ಪಿಸಲು ಸಹಕಾರಿಯಾಗುತ್ತದೆ.

೬. ವ್ಯಾಪಾರಿಗಳಿಗೆ ಈ ಎಲ್ಲ ವಿಷಯಗಳ ಬಗ್ಗೆ ಸರಿಯಾದ ತಿಳುವಳಿಕೆ ಮೂಡಿಸಲು ಸರ್ಕಾರೇತರ ಸಂಸ್ಥೆಗಳ ಒಳಗೊಳ್ಳುವಿಕೆಯೂ ಅಪೇಕ್ಷಣೀಯವಾಗಿರುತ್ತದೆ. ಆದ್ದರಿಂದ ಈ ಸಂಸ್ಥೆಗಳನ್ನು ಸದರಿ ಕಾರ್ಯದಲ್ಲಿ ಭಾಗವಹಿಸುವಂತೆ ಕೋರಬಹುದಾಗಿದೆ. ಈ ಸಂಸ್ಥೆಗಳು ವ್ಯಾಪಾರಿಗಳಿಗೆ ಅವರ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನೂ ತಿಳಿಸಿಕೊಡಬಹುದಾಗಿದೆ. ಸ್ವಯಂ ಸೇವಾ ಸಂಘಗಳ ಮಹತ್ವವನ್ನೂ ತಿಳಿಸಿ ಖಾಸಗಿ ಸಾಲಗಾರರ ಹಿಡಿತದಿಂದ ವ್ಯಾಪಾರಿಗಳನ್ನು ಬಿಡಿಸಬಹುದಾಗಿದೆ. ವ್ಯಾಪಾರಿಗಳು ಅನುಮತಿ ಪತ್ರ ಪಡೆಯಲೂ ಮತ್ತು ಅವುಗಳನ್ನು ಪುನರ್ ನವೀಕರಿಕೊಳ್ಳಲೂ ಸಹ ಈ ಸಂಸ್ಥೆಗಳು ನೆರವಾಗಬಹುದಾಗಿದೆ.

೭. ಜನದಟ್ಟಣೆ ಪ್ರದೇಶಗಳಲ್ಲಿ ಮಾರಾಟದ ವೇಳೆಯನ್ನು ನಿಯಂತ್ರಿಸಬಹುದಾಗಿದೆ. ಇದರಿಂದಾಗಿ ನೂಕುನುಗ್ಗಲು ಉಂಟಾಗುವುದನ್ನೂ, ಪಾದಚಾರಿ ಸಮಸ್ಯೆಗಳನ್ನೂ ಮತ್ತು ಸಂಚಾರದ ಅಡಚಣೆಯನ್ನೂ ತಪ್ಪಿಸಬಹುದಾಗಿದೆ.

೮. ಈ ವ್ಯಾಪಾರಿಗಳಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವುದು ಅಗತ್ಯವಾಗಿದೆ. ಜೊತೆಗೆ ಇವರುಗಳಿಗೆ ಆರೋಗ್ಯ ವಿಮೆಯನ್ನು ಮಾಡಿಸುವುದರಿಂದ, ತಾವಾಗಿಯೇ ತಮ್ಮ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆಯನ್ನು ಪಡೆಯಲು ಅಶಕ್ತರಾದ ಇವರಿಗೆ ಉತ್ತಮ ಚಿಕಿತ್ಸೆ ದೊರೆಯಲು ಸಹಾಯಕವಾಗುತ್ತದೆ. ಬೆಂಗಳೂರು ನಗರದ ಸದಾ ಗಿಜಿಗುಟ್ಟುವ ರಸ್ತೆಗಳಲ್ಲಿ ಗಂಟೆಗಟ್ಟಲೆ ನಿಂತೋ ಕುಳಿತೋ ವ್ಯಾಪಾರ ಮಾಡಿ ಶ್ರಮಪಡುವ ಈ ವ್ಯಾಪಾರಿಗಳ ಜೀವ ಸುರಕ್ಷತೆಗಾಗಿ ಗುಂಪು ವಿಮೆಯನ್ನೂ ಸಹ ಪರಿಚಯಿಸಬಹುದಾಗಿದೆ.

## ಆಧಾರ ಲೇಖನ ಮತ್ತು ಗ್ರಂಥಗಳು

೧. ಚನ್ನಮ್ಮ, ಕೆ.ಸಿ. (೨೦೧೦), ಮಹಿಳೆಯ ದುಡಿಮೆ: ಏಕರೂಪತೆಯ ಪ್ರಶ್ನೆ. ಕಾರ್ಯನಿರತ ಸಂಶೋಧನಾ ಲೇಖನ ಸಂಖ್ಯೆ ೨೪೯, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಚೆನ್, ಮಾರ್ಥಾ ಆಲ್ಟರ್; ಜೋನ್ ವಣಿಕ್ ಮತ್ತು ಮರಿಲಿನ್ ಕಾರ್ (೨೦೦೪). ಬಡತನವನ್ನು ಹೋಗಲಾಡಿಸಲು ಅನೌಪಚಾರಿಕ ಉದ್ಯೋಗ ಮತ್ತು ಲಿಂಗ ಪ್ರಬೇಧಗಳನ್ನು ಮುಖ್ಯವಾಹಿನಿಗೆ ತರುವಿಕೆ. ಲಭ್ಯತೆ: ಡಬ್ಲ್ಯುಡಬ್ಲ್ಯುಡಬ್ಲ್ಯು.ದಿ ಕಾಮನ್ವೆಲ್ತ್. ಆರ್ಗ್/ಜೆಂಡರ್.ನೋಡಿದ ದಿನಾಂಕ:೦೨-೦೩-೨೦೦೯.

೩. ಗೀತಿಕಾ, ತೃಪ್ತಿ ಸಿಂಗ್, ಅನ್ವಿತಾ ಗುಪ್ತಾ (೨೦೧೧), "ಭಾರತದಲ್ಲಿ ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು: ಮಾನವ ಬಂಡವಾಳವನ್ನು ತಿರುಗುಮುರುಗಾಗಿ ಉಪಯೋಗಿಸಿಕೊಂಡ ಕಥನ", ಆರ್ಥಿಕತೆ ಮತ್ತು ಹಣಕಾಸು ಸಂಶೋಧನೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನಡೆದ ಅಂತರ್ರಾಷ್ಟ್ರೀಯ ಸಮಾವೇಶದಲ್ಲಿ ಮಂಡಿಸಿದ ಲೇಖನ, ಐಪಿಇಡಿಆರ್, ಸಂಪುಟ ೪ (೨೦೧೧) ಐಎಸಿಎಸ್ಐಟಿ ಮುದ್ರಣಾಲಯ, ಸಿಂಗಪೂರ್.

೪. ಘೋಷ್, ಜಯತಿ (೨೦೦೯), ಮಾಡೇ ಇಲ್ಲದ ಮತ್ತು ನಿಕೃಷ್ಟ ವೇತನ ನೀಡಿದ: ಭಾರತವನ್ನು ಜಾಗತೀಕರಿಸುವ ನಿಟ್ಟಿನಲ್ಲಿ ಮಹಿಳೆಯರ ಕೆಲಸಗಳು. ನವದೆಹಲಿ; ವಿಮೆನ್ ಅನ್‌ಲಿಮಿಟೆಡ್ (ಮಹಿಳೆಯರಿಗಾಗಿ ಕಾಳಿ ಸಂಸ್ಥೆಯ ಸಹಸಂಸ್ಥೆ).

೫. ಭಾರತ ಸರ್ಕಾರ (೨೦೦೯), ಪಟ್ಟಣಗಳಲ್ಲಿನ ರಸ್ತೆಬದಿಯ ವ್ಯಾಪಾರಿಗಳ ಬಗೆಗಿನ ರಾಷ್ಟ್ರೀಯ ಕಾರ್ಯನೀತಿ, ವಸತಿ ಮತ್ತು ಪಟ್ಟಣಗಳ ಬಡತನ ಹೋಗಲಾಡಿಸುವಿಕೆಯ ಸಚಿವಾಲಯ, ನವದೆಹಲಿ.

೬. ಪಟ್ಟಣಗಳಲ್ಲಿನ ರಸ್ತೆಬದಿಯ ವ್ಯಾಪಾರಿಗಳ ಬಗೆಗಿನ ರಾಷ್ಟ್ರೀಯ ಕಾರ್ಯನೀತಿ (ಎನ್‌ಪಿಯುಎಸ್‌ವಿ) (೨೦೦೬). ಲಭ್ಯತೆ: ಹೆಚ್‌ಟಿಟಿಪಿ:// ಎನ್‌ಸಿಇಯುಐಎಸ್.ನಿಕ್.ಇನ್/ಸ್ಟ್ರೀಟ್%೨೦ವೆಂಡರ್ಸ್%೨೦ ಪಾಲಿಸಿ.ಪಿಡಿಎಫ್, ನೋಡಿದ ದಿನಾಂಕ: ೨೬.೧೨.೨೦೧೪.

೭. ಎನ್‌ಸಿಇಯುಎಸ್ (ಅನೌಪಚಾರಿಕ ವಲಯದಲ್ಲಿನ ಉದ್ದಿಮೆಗಳ ಬಗೆಗಿನ ರಾಷ್ಟ್ರೀಯ ಆಯೋಗ)(೨೦೦೮), ಅನೌಪಚಾರಿಕ ವಲಯದಲ್ಲಿ ಕೆಲಸದ ಸ್ಥಿತಿಗತಿಗಳು ಮತ್ತು ಜೀವನೋಪಾಯ ಉತ್ತಮಗೊಳ್ಳುವಿಕೆ ಬಗೆಗಿನ ವರದಿ. ನವದೆಹಲಿ: ಅಕೆಡೆಮಿಕ್ ಫೌಂಡೇಶನ್.

೮. ಸೇಕರ್, ಹೆಲೆನ್ ಆರ್ (೨೦೦೮), ಅನೌಪಚಾರಿಕ ವಲಯದ ಕಾರ್ಮಿಕರ ಅಭದ್ರತೆಗಳು ಮತ್ತು ದೌರ್ಬಲ್ಯಕ್ಕೆ ಪಕ್ಕಾಗುವಿಕೆಗಳು: ರಸ್ತೆ ಬದಿಯ ವ್ಯಾಪಾರಿಗಳ ಒಂದು ಅಧ್ಯಯನ. ವಿ.ವಿ. ಗಿರಿ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ನೋಯ್ಡಾ.

೯. ಠಾಕೂರ್, ಸಿ.ಪಿ. ಮತ್ತು ಸಿ.ಎಸ್. ವೆಂಕಟರತ್ನಂ (೨೦೦೭). "ಭಾರತದಲ್ಲಿ ಅನೌಪಚಾರಿಕ ವಲಯದಲ್ಲಿನ ಕೆಲಸಗಳ ಸ್ಥಿತಿಗತಿಗಳು", ಕಾರ್ಮಿಕ ಅರ್ಥಶಾಸ್ತ್ರದ ಭಾರತೀಯ ನಿಯತಕಾಲಿಕೆ, ಸಂಪುಟ ೫೦, ಸಂಖ್ಯೆ ೪.

ಹೆಚ್ಚಿನ ವಿವರಗಳಿಗೆ ನೋಡಿರಿ: ಮುತ್ತರಾಯಪ್ಪ ಆರ್. ಮತ್ತು ಚನ್ನಮ್ಮ, ಕೆ.ಸಿ., (೨೦೧೫). "ಬೆಂಗಳೂರು ನಗರದಲ್ಲಿನ ರಸ್ತೆ ಬದಿಯ ಮಹಿಳಾ ವ್ಯಾಪಾರಿಗಳ ಒಂದು ಅಧ್ಯಯನ". ಐಸೆಕ್ ಯೋಜನಾ ವರದಿ.